


ತಮ್ಮ ಕಾವ್ಯವನ್ನು ರೂಪಿಸುವ ವಿಶಿಷ್ಟ ಪ್ರಯತ್ನ ಮಾಡಲು ತೊಡಗಿದರು ಎನ್ನಬಹುದು. ವಸ್ತು ಮಾತ್ರವಲ್ಲದೆ, ಲಯಗಾರಿಕೆ, ವಾಕ್ಯರಚನೆ, ನುಡಿಗಟ್ಟುಗಳ ಬಳಕೆ ಇವೆಲ್ಲವೂ ಕೂಡ ಕನ್ನಡ ಕಾವ್ಯಪರಂಪರೆಯ ಹೊರಗಿನ ದ್ರವ್ಯಗಳಿಂದ ರೂಪಿಸಿಕೊಂಡ ವಿಧಾನವಾಗಿ ಇಲ್ಲಿ ಕಾಣುತ್ತದೆ. ಆದರೂ, ತಿರುಮಲೇಶ್ ಅವರಿಗೆ ಮೂಲತಃ ವಿದ್ವತ್ತಿಗಿಂತ ಹೆಚ್ಚು ನಂಬಿಕೆ ಕಾವ್ಯದಲ್ಲಿಯೇ ಇತ್ತು ಎನ್ನಲು ಅವರ 'ಅರಬ್ಬೀ' ಸಂಕಲನದ ಈ ಸಾಲುಗಳನ್ನು ನೋಡಬಹುದು:

ಇನ್ನಿಲ್ಲಿ ನಿಲ್ಲಲಾರೆ
ಅಗತ್ಯಕ್ಕಿಂತ ಹೆಚ್ಚಿನ ಅರಿವ ನಾ ತಾಳಲಾರೆ
ಯಾಕೆಂದರೆ ಅದು ಕಲ್ಪನೆಯ ಕೊಲೆಗಾರ

(ಬೆಟ್ಟ)

ತಮ್ಮ ಓದು, ಆಸಕ್ತಿ, ತಿಳಿವುಗಳ ಮೂಲಕ ತುಂಬಾ ವಿಸ್ತಾರವಾದ ರುಚಿಯನ್ನು ಸೃಜಿಸಿಕೊಂಡಿದ್ದ ತಿರುಮಲೇಶ್, ತಮ್ಮ ಈ ವೈವಿಧ್ಯಮಯ ಓದನ್ನು ಕನ್ನಡದಲ್ಲಿ ಇಂಗಿಸಿಕೊಂಡು ಬರೆಯುವ, ಅದು ಕನ್ನಡದ ಒರತೆಯಾಗುವಂತೆ ಬತ್ತಿಸಿಕೊಂಡು, ಕನ್ನಡ ಕಾವ್ಯದಲ್ಲಿ ಹೊಸ ಮೊಳಕೆಗಳ ಚಿಗುರಿಸಿ, ವ್ಯಾಪ್ತಿ ಒದಗಿಸುವ ಪ್ರಯತ್ನ ನಡೆಸಿದರು. ಅವರ ಕವನಗಳಲ್ಲಿನ ಪ್ರಸ್ತಾಪಗಳ ವಿಸ್ತಾರ ಬೆರಗು ಹುಟ್ಟಿಸುವಂತದ್ದು. ತಿರುಮಲೇಶ್ ಅವರ ಅನೇಕ ಕವನಗಳಲ್ಲಿ ಓದುಗರಿಗೆ ದಕ್ಕುವ ಪ್ರಸ್ತಾಪಗಳಿಗಿಂತ (allusion) ದಕ್ಕದೇ ಉಳಿಯುವವು ಹೆಚ್ಚೇ ಇದ್ದೀತು, ಆದರೆ, ಹಾಗೆ ಅರ್ಥವಾಗದ ಅಂಶಗಳು ಆ ಕವನಗಳ ಓದಿಗೆ ಭಂಗ ತರುವುದಿಲ್ಲ. ಉದಾಹರಣೆಗೆ ಅವರ 'ಅಕ್ಷಯ ಕಾವ್ಯ'ದ ಈ ಸಾಲುಗಳಲ್ಲಿ ಬರುವ ಸೇಂಟ್ ಥಾಮಸ್ ಅಕ್ವಿನಾಸ್ ಪ್ರಸ್ತಾಪ:

ಕಸ ಪಿಪಾಯಿಯೊಳಗೆರಡು ನಾಯಿಗಳು
ಅಂಡ ಅಂಡಾಶಯ ಕಂಫೀಟುಗಳ
ಜಾಲಾಡಿಸುತ್ತಿವೆ
ಸಕಲರೂ ಕಾಯುತ್ತ ಭಿಕ್ಷುಕರೂ ಹಾಗೇ
ಸೇಂಟ್ ಥಾಮಸ್ ಅಕ್ವಿನಾಸ್ ಹೇಳಿದ ಹಾಗೆ
ಕಾರಣ ವಿನಾ ಕಾರ್ಯವಿಲ್ಲ
ಮನುಷ್ಯರ ದೃಷ್ಟಿಗಳ ಕತ್ತರಿಸುವ ಹಾಗೆ
ಯುಗಾಂತರದ ಗಾಡಿ

ಅಕ್ವಿನಾಸ್ ಪ್ರಸ್ತಾಪ ಯಾಕಾಗಿ ಬಂತು, ಯಾರು, ಎಲ್ಲಿಯವ ಎಂಬೆಲ್ಲ ಮಾಹಿತಿ ಇಲ್ಲದೇ ಓದಿದರೆ ಯಾವುದೇ ಊನವೂ ಆಗದು ನಮ್ಮ ಓದಿಗೆ. ಇದೇ ರೀತಿ, 'ಪಾಪಿಯೂ' ಸಂಕಲನದ ಜುಲೇಖ, ಬಾಲ್ತಸಾರ್, ಸುಡಾನಿನ ಯಾಕೂಬ, 'ಜರೀನ' ಕವನದಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳು, ಅಥವಾ 'ಅಕ್ಷಯ ಕಾವ್ಯ'ದ ಅರಾರತ್ ಪರ್ವತ, ರೋಡಿನ್‌ನ ಶಿಲ್ಪ, ಬಾಮಿಯಾನಿನ ಬುದ್ಧ – ಈ ಯಾವುದೇ ಪ್ರಸ್ತಾಪ ಓದುಗರಿಂದ ವಿದ್ವತ್ತನ್ನು ಬಯಸುವ ರಚನೆಗಳಲ್ಲ. ಓದುಗನ ಓದನ್ನು ಮೀರುವ ಅರ್ಥವಿದ್ದರೂ, ತಿರುಮಲೇಶ್ ಕಾವ್ಯ ಯಾವತ್ತೂ ಪೂರ್ಣವಾಗಿ ಓದುಗನ ಓದಿನ ಹೊರಗೆ ನಿಲ್ಲುವುದಿಲ್ಲ.

ತಿರುಮಲೇಶ್ ಅವರದ್ದೇ ಆದ ಒಂದು ಬಗೆಯ ಹಾಸ್ಯವನ್ನು ಕಟ್ಟಿಕೊಡಲು ವಸ್ತುವಾಗಿ ಬರುವವರಲ್ಲಿ ಹುಲುಮನುಷ್ಯರು (ಇದನ್ನು ಅವರು 'ಲೋಲಿ